# ‘ಶ್ರೀದೇವೀ ಮಹಾತ್ಮೆ’ ಯಕ್ಷಗಾನ ಪ್ರಸಂಗದಲ್ಲಿ ಹಾಸ್ಯ

**ಶ್ರೀದೇವಿ[1] & ಧನಂಜಯ ಕುಂಬ್ಳೆ[2]**

[1]ಸಂಶೋಧನಾ ವಿದ್ಯಾರ್ಥಿನಿ, ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

[2]ಸಹಾಯಕ ಪ್ರಾಧ್ಯಾಪಕರು, ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

**Received: 14-07-2024 ; Acepted: 10-08-2024 ; Published: 07-09-2024**

**DOI: https://doi.org/10.5281/zenodo.13724594**

**ABSTRACT:**

ಕರಾವಳಿಯ ಹೆಮ್ಮೆಯ ಕಲೆಯಾದ ಯಕ್ಷಗಾನವು ವೈಶಿಷ್ಟ್ಯಪೂರ್ಣ ರಂಗಸ್ಥಳ, ಚೌಕಿ ಮತ್ತು ವೈವಿಧ್ಯಪೂರ್ಣ ಕುಣಿತ, ವೇಷಭೂಷಣ, ರಂಗಪ್ರಕ್ರಿಯೆಗಳಿಂದಾಗಿ ವಿಶ್ವದಾದ್ಯಂತ ವಿಶಿಷ್ಟ ಕಲೆಯಾಗಿ ಗುರುತಿಸಿಕೊಂಡಿದೆ. ಇಂತಹ ಯಕ್ಷಗಾನದಲ್ಲಿ ಪ್ರಮುಖ ಪಾತ್ರ ಅಥವಾ ಪಾತ್ರಧಾರಿ ಹಾಸ್ಯಗಾರರು. ಯಕ್ಷಗಾನದಲ್ಲಿ ನಿರ್ದೇಶಕನೆಂದೇ ಗುರುತಿಸಿಕೊಂಡಿರುವ ಭಾಗವತನ ನಂತರದ ಪ್ರಮುಖ ಸ್ಥಾನವನ್ನು ಹಾಸ್ಯಗಾರನು ಪಡೆದುಕೊಳ್ಳುತ್ತಾನೆ. ಚೌಕಿಯಲ್ಲಿ ದೇವರ ಪೀಠವನ್ನು ಇರಿಸಿದ್ದಕ್ಕೆ ಸಮಾನಾಂತರವಾಗಿ ಇನ್ನೊಂದು ಮೂಲೆಯಲ್ಲಿ ಹಾಸ್ಯಗಾರನು ಕುಳಿತುಕೊಳ್ಳುತ್ತಾನೆ. ಭಾಗವತರು ರಂಗದಲ್ಲಿ ನಿರ್ದೇಶಕರಾಗಿ ಕೆಲಸ ಮಾಡಿದರೆ, ಹಾಸ್ಯಗಾರರು ಚೌಕಿ ನಿರ್ವಹಣೆ ಮಾಡುತ್ತಾರೆ. ಹಾಸ್ಯಗಾರನಿಗೆ ಪ್ರತೀ ಪ್ರಸಂಗವು ರಂಗದಲ್ಲಿ ಯಾವ ರೀತಿ ಬಳಕೆಯಾಗಬೇಕೆಂಬ ಅರಿವು ಇರಬೇಕು.

ಯಕ್ಷಗಾನದಲ್ಲಿ ಅತ್ಯಂತ ಹೆಚ್ಚು ಪ್ರದರ್ಶನಗೊಳ್ಳುತ್ತಿರುವ, ಜನಪ್ರಿಯವೂ, ಆರಾಧನಾ ಮಹತ್ವವನ್ನೂ ಒಳಗೊಂಡಿರುವ ಶ್ರೀದೇವೀ ಮಹಾತ್ಮೆ ಪ್ರಸಂಗದಲ್ಲಿ ಬರುವಂತಹ ಹಾಸ್ಯ ಪಾತ್ರಗಳು ಮತ್ತು ಹಾಸ್ಯಗಾರರು ನಿರ್ವಹಿಸುತ್ತಿದ್ದಂತಹ ಇತರ ಹಾಸ್ಯೇತರ ಪಾತ್ರಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಈ ಲೇಖನದ ಉದ್ದೇಶ.

**KEYWORDS:**

ಶ್ರೀದೇವೀ ಮಹಾತ್ಮೆ, ಯಕ್ಷಗಾನ, ಪ್ರಸಂಗ, ಹಾಸ್ಯ, ಹಾಸ್ಯಗಾರರು, ದೂತ, ಪಾತ್ರ.

## ಯಕ್ಷಗಾನದಲ್ಲಿ ಹಾಸ್ಯ:

ಹಾಸವೆಂಬ ಸ್ಥಾಯಿ ಭಾವವೇ ಸೂಚಿಸುವಂತೆ ಮನಸ್ಸಿಗೆ ಮುದ ನೀಡಿ ಮೊಗದಲ್ಲಿ ನಗು ಅರಳಿಸುವುದೇ ಹಾಸ್ಯ. ಅಣಕ, ವ್ಯಂಗ್ಯ, ವಿಕೃತಿ, ಚೇಷ್ಟೆ ಇವುಗಳು ಹಾಸ್ಯದ ಸರಕುಗಳು. ಸರ್ವಾಂಗ ಸುಂದರವಾದ ಯಕ್ಷಗಾನ ಕಲೆಯು ತನ್ನಲ್ಲಿ ನವರಸಗಳನ್ನೂ ತುಂಬಿಕೊಂಡಿದೆ. ಪ್ರೇಕ್ಷಕರನ್ನು ಆಕರ್ಷಿಸುವಲ್ಲಿ ಹಾಸ್ಯವು ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಯಕ್ಷಗಾನದಲ್ಲಿ ಭಾಗವತನ ನಂತರ ನಿರ್ದೇಶಕನಾಗಿ ಪ್ರಮುಖ ಸ್ಥಾನವನ್ನು

ಹಾಸ್ಯಗಾರ ಹೊಂದಿದ್ದಾನೆ. ಪ್ರಸಂಗದ ನಡೆಯಲ್ಲಿ ಕೊಂಡಿಯಾಗಿ ವ್ಯವಹರಿಸುವವನೇ ಹಾಸ್ಯಗಾರ. ಹಾಸ್ಯಗಾರನ ಶ್ರೇಷ್ಠತೆ ನಿರ್ಣಯವಾಗುವುದು ಭಾಗವತನೊಂದಿಗೆ ಇಡೀ ಪ್ರಸಂಗವನ್ನು ಹೇಗೆ ಸಮರ್ಥವಾಗಿ ಕೊಂಡೊಯ್ಯಬಲ್ಲ ಎಂಬುವುದರಲ್ಲಿ. ಹಾಸ್ಯಗಾರರಿಗೆ ಸಹ ಕಲಾವಿದನ ಬೌದ್ಧಿಕ ಸಾಮರ್ಥ್ಯದ ಅರಿವು ಇರಬೇಕು. ರಂಗಸ್ಥಳದಲ್ಲಿ ಹಾಸ್ಯ ಪಾತ್ರಕ್ಕೆ ಕಾಲಾವಕಾಶದ ಲಭ್ಯತೆ ಸ್ವಲ್ಪವಾದರೂ, ಇರುವಂತಹ ಹೊತ್ತಿನಲ್ಲಿ ಹೇಗೆ ಪಾತ್ರ ನಿರ್ವಹಣೆ ಮಾಡಿದನೆಂಬುದು ಮುಖ್ಯವಾಗುತ್ತದೆ.

ಯಕ್ಷಗಾನ ಪ್ರಸಂಗಗಳಲ್ಲಿ ಶ್ರೀದೇವೀ ಮಹಾತ್ಮೆ ಪ್ರಸಂಗವು ಉಳಿದೆಲ್ಲಾ ಪ್ರಸಂಗಗಳಿಗಿಂತ ಪ್ರತ್ಯೇಕವಾಗಿ ನಿಲ್ಲುವಂತಹ ಒಂದು ಕಥಾಪ್ರಸಂಗ. ಶಾಕ್ತಪರಂಪರೆಯ ಔನ್ನತ್ಯವನ್ನು ಈ ಪ್ರಸಂಗವು ಎತ್ತಿಹಿಡಿಯುತ್ತದೆ. ಸುಮಾರು ಒಂಬತ್ತು ದಶಕಗಳಿಂದ ಪ್ರದರ್ಶಿತಗೊಳ್ಳುತ್ತಿರುವ ಈ ಪ್ರಸಂಗವು ವರ್ಷದಲ್ಲೇ ಅತೀ ಹೆಚ್ಚು ಪ್ರದರ್ಶನಗೊಳ್ಳುವಂತಹ ಪುರಾಣ ಪ್ರಸಂಗ. ಪ್ರಮುಖವಾಗಿ, ಆರು ಶಾಖೆಗಳನ್ನು ಹೊಂದಿರುವ ತೆಂಕಿನ ಕಟೀಲು ಶ್ರೀ ದುರ್ಗಾಪರಮೇಶ್ವರಿ ಪ್ರಸಾದಿತ ದಶಾವತಾರ ಯಕ್ಷಗಾನ ಮಂಡಳಿಯಲ್ಲಿ ಒಂದು ತಿರುಗಾಟದಲ್ಲಿ ಸುಮಾರು 600 ಹಾಗೂ ಬಡಗಿನಲ್ಲಿ ಐದು ಶಾಖೆಗಳನ್ನು ಹೊಂದಿರುವ ದುರ್ಗಾಪರಮೇಶ್ವರಿ ದಶಾವತಾರ ಯಕ್ಷಗಾನ ಮಂಡಳಿ, ಮಂದಾರ್ತಿ ಮೇಳದಲ್ಲಿ ಒಂದು ತಿರುಗಾಟದಲ್ಲಿ ಸುಮಾರು 300 ಶ್ರೀದೇವೀ ಮಹಾತ್ಮೆ ಪ್ರಸಂಗದ ಹರಕೆ ಬಯಲಾಟಗಳು ನಡೆಯುತ್ತವೆ. ಕೇವಲ ಇವೆರಡೇ ಮೇಳಗಳಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಪ್ರದರ್ಶಿತಗೊಳ್ಳುತ್ತಿರುವ ಈ ಪ್ರಸಂಗವು ಇನ್ನಿತರ ವೃತ್ತಿಪರ ಹಾಗೂ ಹವ್ಯಾಸಿ ಮೇಳಗಳೆಲ್ಲವೂ ಸೇರಿ ಸುಮಾರು 1,500ಕ್ಕೂ ಮಿಗಿಲಾದ ಪ್ರದರ್ಶನವನ್ನು ಪ್ರತೀ ವರ್ಷ ಕಾಣುತ್ತಿದೆ. ಇಂತಹ ಒಂದು ಪ್ರಮುಖ ಯಕ್ಷಗಾನ ಪ್ರಸಂಗ ಶ್ರೀದೇವೀ ಮಹಾತ್ಮೆ ಬಯಲಾಟದಲ್ಲಿ ಬರುವಂತಹ ಹಾಸ್ಯ ಪಾತ್ರಗಳು ಮತ್ತು ಹಾಸ್ಯಗಾರರು ನಿರ್ವಹಿಸುವಂತಹ ಹಾಸ್ಯೇತರ ಪಾತ್ರಗಳ ಬಗೆಗೆ ವಿಶ್ಲೇಷಣೆ ಈ ಲೇಖನದ ಉದ್ದೇಶ.

**ಶ್ರೀದೇವೀ ಮಹಾತ್ಮೆಯಲ್ಲಿ ಬರುವ ಹಾಸ್ಯ ಪಾತ್ರಗಳು:**

**ಓಲೆ ದೂತ:**

ಮಾಲಿನಿಯ ತಾಯಿ ದಿತೀ ದೇವಿ ವಿದ್ಯುನ್ಮಾಲಿಗೆ ಮಾಲಿನಿಯನ್ನು ಬಂದು ಮದುವೆಯಾಗುವಂತೆ ಕೇಳಿಕೊಳ್ಳಲು ಬರೆಸಿದ ಓಲೆಯನ್ನು ಓಲೆದೂತನ ಮೂಲಕ ಕಳುಹಿಸುತ್ತಾಳೆ. ಓಲೆ ದೂತನನ್ನು ಇತ್ತೀಚಿನ ದೇವೀ ಮಹಾತ್ಮೆ ಬಯಲಾಟಗಳಲ್ಲಿ ಕೆಲವು ಮೇಳಗಳಲ್ಲಿ ಕೈಬಿಡಲಾಗಿದೆ. ಇನ್ನು ಕೆಲವು ಮೇಳಗಳಲ್ಲಿ ಹಿರಿಯ ಬಲಿಪ ನಾರಾಯಣ ಭಾಗವತರ ಶ್ರೀದೇವೀ ಮಹಾತ್ಮೆ ಪ್ರಸಂಗದ ಈ ಸಂದರ್ಭದ ಪದ್ಯಗಳನ್ನು ಬಳಸಿಕೊಂಡು ಪ್ರದರ್ಶಿಸಲಾಗುತ್ತದೆ. ಪೆರುವಡಿ ನಾರಾಯಣ ಭಟ್ಟರು ಹೇಳುವಂತೆ ಎಪ್ಪತ್ತು ವರ್ಷಗಳ ಹಿಂದೆ ಧರ್ಮಸ್ಥಳ ಮೇಳದಲ್ಲಿ ಓಲೆದೂತನ ಪಾತ್ರವನ್ನು ಬಳಸಿಕೊಳ್ಳಲಾಗುತ್ತಿದ್ದು. ಇದೇ ಸಂದರ್ಭದಲ್ಲಿ ಬಲಿಪ ನಾರಾಯಣ ಭಾಗವತರು ಹೇಳುವಂತೆ ಕಟೀಲು ಮೇಳದಲ್ಲಿ

ಓಲೆದೂತನ ಪಾತ್ರವನ್ನು ಬಳಸಿಕೊಳ್ಳುತ್ತಿರಲಿಲ್ಲ. ಹಿಂದೆ ಓಲೆದೂತನು ವಿದ್ಯುನ್ಮಾಲಿಗೆ ಓಲೆಯನ್ನು ಕೊಡುವಾಗ ಕುಣಿಯಲು ಅವಕಾಶವನ್ನು ಮಾಡಿಕೊಡಲು ಒಂದು ಪದ್ಯವನ್ನು ಕೊಡಲಾಗುತ್ತಿತ್ತು. ಓಲೆ ದೂತನಿಗೆ ರಕ್ಕಸ ದೂತನ ಮುಖವರ್ಣಿಕೆ ಮತ್ತು ವೇಷಭೂಷಣಗಳನ್ನು ಬಳಸಿಕೊಳ್ಳಲಾಗುತ್ತದೆ.

**ದೇವ ದೂತ:**

ದೇವಲೋಕಕ್ಕೆ ರಕ್ಕಸರ ಧಾಳಿಯಾದಾಗ ರಕ್ಕಸರನ್ನು ಬಾಗಿಲಲ್ಲೇ ತಡೆದು ನಿಲ್ಲಿಸಿ ಅವರ ಪುರ್ವಾಪರಗಳನ್ನು ವಿಚಾರಿಸಿ ದೇವೇಂದ್ರನಲ್ಲಿಗೆ ಹೋಗಿ ವರ್ತಮಾನವನ್ನು ತಿಳಿಸುವವನೇ ದೇವ ದೂತ. ಇವನನ್ನು ಬಾಗಿಲ ದೂತನೆಂದೂ ಕರೆಯುತ್ತಾರೆ. ಹಿಂದೆ ಐದು, ಮೂರು, ಎರಡು ದಿನಗಳ ಶ್ರೀದೇವೀ ಮಹಾತ್ಮೆ ಬಯಲಾಟಗಳಲ್ಲಿ ಪ್ರಸಂಗವನ್ನು ದೀರ್ಘ ಕೊಂಡೊಯ್ಯುವ ಅವಶ್ಯಕತೆ ಇದ್ದುದರಿಂದ ದೇವಲೋಕಕ್ಕೆ ವಿದ್ಯುನ್ಮಾಲಿ, ಮಹಿಷಾಸುರ, ಶುಂಭ-ನಿಶುಂಭರ ಧಾಳಿ ಹೀಗೆ ಪ್ರತಿಯೊಂದು ಧಾಳಿಯಾದಾಗಲೂ ಬಾಗಿಲ ದೂತನನ್ನು ಬಳಸಿಕೊಳ್ಳಲಾಗುತ್ತಿತ್ತು. ಒಂದು ದಿನದ ಪ್ರಸಂಗಕ್ಕಾಗುವಾಗ ಕೇವಲ ಮಹಿಷಾಸುರನ ಧಾಳಿಯಾದಾಗ ಮಾತ್ರವಷ್ಟೇ ಬಾಗಿಲ ದೂತನ ಆಗಮನ. ಮಹಿಷಾಸುರನ ಧಾಳಿಯ ಸಂದರ್ಭದಲ್ಲಿ ಹಾಸ್ಯದ ಸಂಭಾಷಣೆ ಸುಂದರವಾಗಿ ಮೂಡಿಬರುತ್ತದೆ. “ಹೋಯ್ ಇದ್ಯಾರು ಕೋಣನನ್ನು ಬಿಟ್ಟದ್ದು... ಕಟ್ಟಿ ಹಾಕಿ... ಅಕ್ಕಚ್ಚು ಕೊಡಿ... ಹುಲ್ಲು ಕೊಡಿ..” ಈ ರೀತಿಯಾಗಿ ಸಂಭಾಷಣೆ ಮುಂದುವರಿಯುತ್ತದೆ.

ಪೆರುವಡಿ ನಾರಾಯಣ ಭಟ್ಟರು ಹೇಳುವಂತೆ ಹಿಂದೆ ನಡೆಯುತ್ತಿದ್ದ ಬಯಲಾಟಗಳಲ್ಲಿ ದೂತನ ಕೈಯನ್ನು ಹಿಂದಕ್ಕೆ ಬಟ್ಟೆಯಿಂದ ಕಟ್ಟಿ , ಅದಕ್ಕೆ ಬಿಲ್ಲನ್ನು ಸಿಕ್ಕಿಸಿ, ಮೂಗಿಗೆ ಬಿಳಿ ನಾಮವನ್ನು ಎಳೆದು ಹೋಗಿ ನಿನ್ನ ಅಪ್ಪನಲ್ಲಿ (ದೇವೇಂದ್ರನಲ್ಲಿ) ಹೇಳು ಎಂದು ರಕ್ಕಸರು ಅಟ್ಟುತ್ತಿದ್ದರಂತೆ. ಬಾಗಿಲು ದೂತನಿಗೆ ದೇವೇಂದ್ರನಲ್ಲಿ ಒಂದು ಅಥವಾ ಎರಡು ಪದ್ಯಗಳನ್ನು ಕೊಡುವುದು ರೂಢಿಯಲ್ಲಿದೆ.

ಬಾಗಿಲು ದೂತನಿಗೆ ನಸುಗೆಂಪು, ನಸುಹಳದಿ ಮಿಶ್ರಿತ ಬಿಳಿಯ ಬಣ್ಣದ ಪಾಕವನ್ನು ಮುಖಕ್ಕೆ ಲೇಪಿಸಿ ನಂತರ ಹಣೆಗೆ ವೈಷ್ಣವ ನಾಮವನ್ನು ಬಿಳಿ ಬಣ್ಣದಲ್ಲಿ ಬರೆದು, ಮಧ್ಯದಲ್ಲಿ ಕಪ್ಪು ರೇಖೆ. ಭ್ರೂಮಧ್ಯದಲ್ಲಿ ಸ್ವಲ್ಪ ಕೆಳಗಾಗಿ ಕೆಂಪು ತಿಲಕ. ಕಣ್ಣು , ಹುಬ್ಬುಗಳಿಗೆ ಕಾಡಿಗೆ. ಕಣ್ಣು ಹಾಗೂ ಕಿವಿಯ ಮಧ್ಯದ ಅಂತರದಲ್ಲಿ ಬಿಳಿಯ ಸಮಾನಾಂತರ ರೇಖೆಗಳು ಹಾಗೂ ಇದರೊಳಗೆ ಕೆಂಪು ಬಣ್ಣದ ರೇಖೆ. ತುಟಿಗೆ ಕೆಂಪು ಹಾಗೂ ಮೀಸೆಯ ರಚನೆ. ಇವಿಷ್ಟು ಮುಖವರ್ಣಿಕೆಯಾದರೆ ಬಿಳಿಯ ಉದ್ದ ಅಂಗಿ, ಬಿಳಿಯ ಪೈಜಾಮ, ಸೊಂಟಕ್ಕೆ ಅಥವಾ ಹೆಗಲಿಗೆ ಉಪಯೋಗವಾಗುವಂತೆ ಸೋಗವಲ್ಲಿ ಅಥವಾ ಶಾಲು, ತಲೆಗೆ ಮುಂಡಾಸು, ಕಾಲಿಗೆ ಗೆಜ್ಜೆ , ಕೈಯಲ್ಲಿ ಉದ್ದದ ಕೋಲು- ಇದು ವೇಷಭೂಷಣ.

**ಮದುವೆ ಪುರೋಹಿತ:**

ಮಾಲಿನಿ ಹಾಗೂ ವಿದ್ಯುನ್ಮಾಲಿಯ ಮದುವೆಯ ಸಂದರ್ಭದಲ್ಲಿ ಮದುವೆ ಮಾಡಿಸಲೆಂದು ಪುರೋಹಿತನ ಆಗಮನವಾಗುತ್ತದೆ. ಈತ ದಿತೀ ದೇವಿಯ ಪಕ್ಷದಿಂದ

ಬರುವ ಪುರೋಹಿತ. ಈ ಸಂದರ್ಭವು ದೇವೀ ಮಹಾತ್ಮೆ ಪ್ರಸಂಗದಲ್ಲಿ ಹಾಸ್ಯವನ್ನು ತರಲೆಂದೇ ಹುಟ್ಟುಹಾಕಿರುವುದೆಂದು ಹೇಳಿದರೂ ತಪ್ಪಾಗಲಾರದು. ಇಲ್ಲಿ ಪುರೋಹಿತ ಹೆಣ್ಣು ನೋಡುವ ಶಾಸ್ತ್ರವನ್ನು ಮಾಡಿಸಿ, ನಂತರ ಮದುವೆ ಮಾಡಿಸಿ, ಉಡುಗೊರೆ ನೀಡಿ, ಹೆಣ್ಣೊಪ್ಪಿಸಿ ಕೊಡುವ ಶಾಸ್ತ್ರವನ್ನು ನಡೆಸುತ್ತಾನೆ. ಇಲ್ಲಿ ಪುರೋಹಿತನ ಜೊತೆಯಲ್ಲಿ ಲಾಡು ಸುಬ್ಬಿಯೆಂದು ಪುರೋಹಿತರ ಹೆಂಡತಿಯನ್ನು ಈ ಸಂದರ್ಭದಲ್ಲಿ ಹಿಂದೆ ಬಳಸಿಕೊಳ್ಳಲಾಗುತ್ತಿತ್ತು.

ಮುಖವರ್ಣಿಕೆ ಬಿಳಿಯ ಅಡ್ಡ ನಾಮ, ಮಧ್ಯಕ್ಕೆ ಕೆಂಪು ಬೊಟ್ಟು, ಕಚ್ಚೆ, ಅದರ ಮೇಲೆ ಸೊಂಟಕ್ಕೆ ತುಂಡು ವಸ್ತ್ರ ಮತ್ತು ಶಾಲು, ಮುಂಡಾಸು, ಕಾಲಿಗೆ ಗೆಜ್ಜೆ ಧರಿಸಲಾಗುತ್ತದೆ. ಕೆಲವರು ಕೆದರಿದ ಕೂದಲು, ಹಿಂದೆ ಜುಟ್ಟು, ನೆತ್ತಿಯ ಮೇಲೆ ನೆಟ್ಟಗೆ ನಿಲ್ಲುವಂತೆ ಹೆಣೆದ ಕೂದಲನ್ನೂ ಬಳಸಿಕೊಳ್ಳುವುದುಂಟು. ರಾಕ್ಷಸ ಪುರೋಹಿತನಾದ ಕಾರಣ ಮುಖವರ್ಣಿಕೆಯನ್ನು ಸ್ವಲ್ಪ ಘೋರವಾಗಿಯೂ ಮಾಡುವುದಿದೆ.

**ಹೊಗಳಿಕೆ ದೂತ:**

ರಕ್ಕಸರು ದೇವಲೋಕಕ್ಕೆ ಧಾಳಿಯನ್ನು ಮಾಡಿ ದೇವೇಂದ್ರನ್ನು ಸೋಲಿಸಿ ದೇವಲೋಕದ ಗದ್ದುಗೆಯನ್ನು ಏರಿದಲ್ಲಿಗೆ ಹೊಗಳಿಕೆ ದೂತ. ದೇವೇಂದ್ರನ ಬಾಗಿಲು ದೂತನೇ ಮುಸುಕು ಹಾಕಿಕೊಂಡು ರಂಗಸ್ಥಳದ ಅಂಚಿನಲ್ಲಿ ನಿಲ್ಲುತ್ತಿದ್ದ. ಅವನನ್ನು ವಿದ್ಯುನ್ಮಾಲಿ ಕರೆದು ತಾನು ಪಟ್ಟಕ್ಕೆ ಏರಿದ ಸುದ್ದಿಯನ್ನು ಡಂಗುರ ಸಾರಲು ಹೇಳುತ್ತಾನೆ. ಹೊಗಳಿಕೆಯವನು ಭಾಗವತರ ಕೈಯಿಂದ ಜಾಗಟೆ ತೆಗೆದುಕೊಂಡು ಅದನ್ನು ಬಡಿಯುತ್ತಾ ಬೇರೆ ಬೇರೆ ಭಾಷೆಗಳಲ್ಲಿ ಹಾಸ್ಯಮಿಶ್ರಿತವಾಗಿ ಡಂಗುರ ಸಾರುತ್ತಾನೆ. ಹೊಗಳಿಕೆ ದೂತನ ಪಾತ್ರವನ್ನು ಈಗ ಕೆಲವೆಡೆಗಳಲ್ಲಿ ಮಾತ್ರ ಕಾಣಬಹುದು.

**ಮಾಲಿನಿ ದೂತ:**

ವಿದ್ಯುನ್ಮಾಲಿಯ ಮರಣದ ವಾರ್ತೆಯನ್ನು ತಿಳಿಸಲು ಬರುವವನೇ ಮಾಲಿನಿ ದೂತ. ಮಾಲಿನಿ ದೂತನ ಪಾತ್ರ ಚಿತ್ರಣವನ್ನು ಅವಲೋಕಿಸಿದರೆ ಹಲವು ವರ್ಷಗಳಿಂದ ಅಲ್ಪಸ್ವಲ್ಪ ಬದಲಾವಣೆಗಳಿದ್ದರೂ, ಸಾಮಾನ್ಯವಾಗಿ ಒಂದೇ ತೆರನಾಗಿ ನಡೆದುಕೊಂಡು ಬಂದಿರುವುದನ್ನು ಗಮನಿಸಬಹುದು. ವಿದ್ಯುನ್ಮಾಲಿ ಸತ್ತ ವಾರ್ತೆಯನ್ನು ತಿಳಿಸಲು ದೂತ ಅಳುತ್ತಾ ಬರುತ್ತಾನೆ. ವಿದ್ಯುನ್ಮಾಲಿಯ ಆರಂಭದ ವಿಜಯವನ್ನು ದೂತ ಅಳುತ್ತಾ ಹೇಳಿದಾಗ ಮಾಲಿನಿಯು ಸಂತೋಷದ ವಿಷಯವನ್ನು ನಗುನಗುತ್ತಾ ಹೇಳಬೇಕೆನ್ನುತ್ತಾಳೆ. ದೂತ ಮಾತು ಮುಂದುವರಿಸುತ್ತಾ ವಿದ್ಯುನ್ಮಾಲಿಯ ಮರಣದ ವಾರ್ತೆಯನ್ನು ಕೂಡಾ ನಗುತ್ತಾ ಹೇಳಿದಾಗ, ಮಾಲಿನಿ ಮೂರ್ಛಿತಳಾಗಿ ಬಿದ್ದಲ್ಲಿಗೆ ದೂತನ ನಿರ್ಗಮನ. ಮಾಲಿನಿ ದೂತನಿಗೆ ಸಾಮಾನ್ಯವಾಗಿ ಎರಡು ಪದ್ಯಗಳನ್ನು ನೀಡಿ ಕುಣಿಯಲು ಅವಕಾಶವನ್ನು ನೀಡಲಾಗುತ್ತದೆ.

ಈ ದೂತನ ಮುಖವರ್ಣಿಕೆಗೆ ಮೂಗಿನ ಬಳಿ ಬಿಳಿಯ ದೊಡ್ಡದಾದ ರೇಖೆಯೊಂದಿಗೆ ಪ್ರಾರಂಭಿಸಿ, ನಂತರ ವೃತ್ತಾಕಾರವಾಗಿ ಕಪ್ಪು, ಕೆಂಪು, ಹಳದಿ ಗೆರೆಗಳನ್ನು ಬರೆಯಲಾಗುತ್ತದೆ. ತಲೆಗೆ ಕೆದರಿದ ಕೂದಲಿನ ಟೋಪನ್, ಬಣ್ಣದ ಉದ್ದ ಅಂಗಿ, ಪೈಜಾಮ, ಕುತ್ತಿಗೆಗೆ

ಸೋಗವಲ್ಲಿ, ಹೊಟ್ಟೆಗೆ ಬಟ್ಟೆಯ ಗಂಟನ್ನು ಕಟ್ಟಿ ದೊಡ್ಡ ಹೊಟ್ಟೆ, ಕುತ್ತಿಗೆಗೆ ಅಡ್ಡಿಗೆ, ಉದ್ದದ ಸರ, ಕಾಲಿಗೆ ಗೆಜ್ಜೆ. ಮಾಲಿನಿ ದೂತನ ಮುಖವರ್ಣಿಕೆ ಕಲಾವಿದನ ಕಲ್ಪನೆಗೆ ಅನುಸಾರವಾಗಿ ಮೂಡಿ ಬರುತ್ತದೆ. ರಾಕ್ಷಸ ದೂತನ ಒಟ್ಟು ವೇಷ ವಿರೂಪದಿಂದ ಕೂಡಿದ್ದು ಹಾಸ್ಯಕ್ಕೆ ತಕ್ಕಂತೆ ಇರಬೇಕು. ಮೊದಲು ಮೇಳದಲ್ಲಿ ಒಬ್ಬನೇ ಹಾಸ್ಯಗಾರನಿದ್ದು, ಎಲ್ಲಾ ಹಾಸ್ಯಪಾತ್ರಗಳ ಜೊತೆ ಇತರ ಕೆಲವು ಪೋಷಕ ಪಾತ್ರಗಳನ್ನು ಮಾಡುವ ಅನಿವಾರ್ಯತೆ ಇದ್ದುದರಿಂದ ಸಮಯ ಹೊಂದಾಣಿಕೆಗೋಸ್ಕರ ರಾಕ್ಷಸ ದೂತನ ಮುಖವರ್ಣಿಕೆಯನ್ನು ಸರಳವಾಗಿ ಮಾಡಿ ಮುಗಿಸುತ್ತಿದ್ದರು.

ದಿ|| ವಿಟ್ಲ ಗೋಪಾಲಕೃಷ್ಣ ಜೋಶಿಯವರು ರಾಕ್ಷಸ ದೂತನ ಪಾತ್ರಕ್ಕೆ ಹೊಸ ಆಯಾಮವನ್ನು ತಂದಿತ್ತರು. ಇವರು ಗೆರಟೆ, ಅಮೂಲ್ ಹಾಲಿನ ಪುಡಿಯೊಂದಿಗೆ ಬರುತ್ತಿದ್ದ ಚಮಚ ಮೊದಲಾದವುಗಳಿಂದ ಸೃಜನಶೀಲವಾಗಿ ಆಭರಣಗಳನ್ನು ತಯಾರಿಸುತ್ತಿದ್ದರು. ಮಾಲಿನಿ ದೂತನ ಮುಖವರ್ಣಿಕೆಯ ಮೆರುಗನ್ನು ಹೆಚ್ಚಿಸುತ್ತಿದ್ದರು.

ಮಾಲಿನಿ ದೂತ ಹಾಗೂ ಮಾಲಿನಿಯ ಸಂಭಾಷಣೆಯ ಒಂದು ಸಣ್ಣ ತುಣುಕು ಹೀಗಿದೆ: (ಮಾಲಿನಿಯ ಬಳಿ ದೂತ ಅಳುತ್ತಾ ಬರುವ ಸಂದರ್ಭ)

**ದೂ:** ಹೇ...ಮ್ಮಾ...ಮಾಲಿನಿ... ಹೇ...ಮ್ಮಾ...ಮಾಲಿನಿ...

**ಮಾ:** ಅದು ಹೇ ಅಮ್ಮಾ ಮಾಲಿನಿ

**ದೂ:** ಆಯ್ತುಮ್ಮ. ಅಮ್ಮಾ ನಾನು ನಿಮ್ಮ ಗಂಡ...

**ಮಾ:** ಅಧಿಕಪ್ರಸಂಗಿ ಏನು ಮಾತನಾಡುತ್ತಿದ್ದೀಯಾ?

**ದೂ:** ಅಮ್ಮಾ ನೀವು ಮಧ್ಯಕ್ಕೆ ಬಾಯಿ ಹಾಕಿದಿರಿ. ನನ್ನ ಮಾತು ಇನ್ನೂ ಮುಗಿದಿಲ್ಲ. ನಾನು ಮತ್ತೂ ನಿಮ್ಮ ಗಂಡ...

ಹೀಗೆ ಸಂಭಾಷಣೆ ಮುಂದುವರಿಯುತ್ತದೆ. ಈ ರೀತಿಯ ಪಾತ್ರಚಿತ್ರಣವನ್ನು ಪ್ರಾರಂಭ ಮಾಡಿದವರು ದಿ|| ವಿಟ್ಲ ಗೋಪಾಲಕೃಷ್ಣ ಜೋಷಿಯವರು ಎಂದು ಪೆರುವಡಿ ನಾರಾಯಣ ಭಟ್ಟರು ಗುರುತಿಸುತ್ತಾರೆ.

**ರಕ್ಕಸ ದೂತ:**

ಧೂಮ್ರಾಕ್ಷ, ಚಂಡಮುಂಡರು, ರಕ್ತಬೀಜ ಮಡಿದ ವಾರ್ತೆಯನ್ನು ಶುಂಭನ ಬಳಿ ಹೇಳಲು ರಕ್ಕಸ ದೂತನು ಬರುತ್ತಾನೆ. ಈ ಪಾತ್ರವನ್ನು ಈಗ ಬಳಸಿಕೊಳ್ಳಲಾಗುತ್ತಿಲ್ಲ. ಕಪ್ಪು, ಬಿಳಿ, ಕೆಂಪು, ಹಳದಿ ಬಣ್ಣಗಳನ್ನು ಬಳಸಿಕೊಂಡು ಕಲಾವಿದರ ಮನೋಧರ್ಮಕ್ಕೆ ಅನುಗುಣವಾಗಿ ವಿಕಾರವಾದ ಮುಖವರ್ಣಿಕೆ. ಬಣ್ಣದ ನಿಲುವಂಗಿ, ಪೈಜಾಮ, ಕೆದರಿದ ಕೂದಲು, ದೊಡ್ಡ ಕಿವಿ, ದೊಡ್ಡ ಹೊಟ್ಟೆ, ಗೆಜ್ಜೆ ಇತ್ಯಾದಿಗಳು ಈ ಪಾತ್ರದ ವೇಷಭೂಷಣಗಳು.

**ದರ್ಶನ ಪಾತ್ರ:**

ಶ್ರೀದೇವೀ ಮಹಾತ್ಮೆ ಪ್ರಸಂಗದಲ್ಲಿ ರಕ್ತಬೀಜನ ವಧೆಯು ಶಕ್ತಿ ಸ್ವರೂಪಿಣಿ ದೇವಿ

ಹಾಗೂ ಆಕೆಯ ಒಂದಂಶವಾದ ರಕ್ತೇಶ್ವರಿಯ ಮೂಲಕ ನಡೆಯುತ್ತದೆ. ದೈವಾರಾಧನೆಯು ತುಳುನಾಡಿನ ಪ್ರಮುಖ ಆರಾಧನೆಗಳಲ್ಲಿ ಒಂದು. ರಕ್ತೇಶ್ವರಿಯನ್ನು ಕರಾವಳಿಯ ಜನರು ದೈವವಾಗಿ ಆರಾಧಿಸುತ್ತಾರೆ. ಆದುದರಿಂದ ತುಳುನಾಡಿನ ಮಣ್ಣಿನ ಕಲೆಯಾದ ಯಕ್ಷಗಾನದಲ್ಲಿಯೂ ಕೂಡಾ ರಕ್ತೇಶ್ವರಿಯನ್ನು ದೈವದಂತೆ ಚಿತ್ರಿಸುವ ಪರಂಪರೆ ಆರಂಭವಾಗಿದ್ದಿರಬಹುದು. ರಕ್ತೇಶ್ವರಿಯ ಜೊತೆಯಲ್ಲಿ ದರ್ಶನ ಪಾತ್ರಿಯೂ ಬರುತ್ತಾನೆ. ರಕ್ತಬೀಜನ ವಧೆಯಾದಲ್ಲಿಗೆ ದೇವಿ ಹಾಗೂ ರಕ್ತೇಶ್ವರಿಯ ಪಾತ್ರಗಳು ರಂಗದಿಂದ ನಿರ್ಗಮಿಸುತ್ತವೆ. ನಂತರ ಪಾತ್ರಿಯು ಆವೇಶಭರಿತನಾಗಿ ಹಾಸ್ಯ ಮಿಶ್ರಿತ ಮಾತುಗಳನ್ನು ಕನ್ನಡ/ತುಳು ಭಾಷೆಯಲ್ಲಿ ಆಡುತ್ತಾನೆ. ಈಗ ರಕ್ತೇಶ್ವರಿ ಪಾತ್ರಕ್ಕೆ ಅಣಿ ಕಟ್ಟಿ ಮಾಡುವ ಪದ್ಧತಿ ನಿಂತಿದ್ದರೂ ದರ್ಶನ ಪಾತ್ರಿಯ ಪಾತ್ರ ನಿರ್ವಹಣೆ ಮುಂದುವರಿಯುತ್ತಿದೆ. ಸಾಮಾನ್ಯ ಮುಖವರ್ಣಿಕೆ, ಹಣೆಗೆ ಬಿಳಿ ಅಡ್ಡನಾಮ, ಬರಿಮೈ, ಕೆಂಪು ಬಟ್ಟೆಯನ್ನು ಉಟ್ಟು , ಸೊಂಟಕ್ಕೆ ಬಿಗಿದ ಶಾಲು, ಕಾಲಿಗೆ ಗೆಜ್ಜೆ, ಕೆಲವರು ಕೊರಳಿಗೆ ಹೂವಿನ ಹಾರ, ಬಲಗೈಯಲ್ಲಿ ಕತ್ತಿ, ಎಡಗೈಯಲ್ಲಿ ಸಣ್ಣ ಘಂಟಾ ಮಣಿ. ಇದು ದರ್ಶನ ಪಾತ್ರಿಯ ಚಿತ್ರಣ.

ದರ್ಶನ ಪಾತ್ರಿಯು ಆವೇಶ ಬಂದಂತೆ ನಡುಗುತ್ತಾ "ಭಾಗವತೆರೇ, ಬಾರೀ ಪೊರ್ಲುಡು ಪದ ಪಂಡಾರ್, ಅವು ಈರ್ ಪಂಡಿನೆ ಅತ್ತ್, ಈರ್ನ ನಾಲಾಯಿಡ್ ಕುಳ್ಳ್‌ದ್ ಯಾನ್ ಪಣ್ಪಾಯಿನೆ. ನಣಲಾ ಇಂಚನೇ ಅಪ್ಪೆನ ಸೇವೆ ಮಲ್ತೊಂದು ಬಲೆ. ಯಾನ್ ಈರೆನ್ ಕಾತೊಂದು ಬರ್ಪೆ. ಕೀರ್ತಿ ಬರಡ್. ದೆತ್ತೊಂದ್ಲೆ ಬೂಳ್ಯ" ಹೀಗೆ ಎಲ್ಲಾ ಹಿಮ್ಮೇಳದವರು, ಆಟ ಆಡಿಸಿದವರು, ಪ್ರೇಕ್ಷಕರಿಗೆ ಅಭಯ ಕೊಡುವಂತೆ ಹಾಸ್ಯ ಮಿಶ್ರಿತವಾಗಿ ಮಾತನಾಡುತ್ತಾನೆ. ನಂತರ ಆವೇಶ ಬಂದವರಂತೆ ನರ್ತಿಸಿ ನಿರ್ಗಮನ.

## ಶ್ರೀದೇವೀ ಮಹಾತ್ಮೆಯಲ್ಲಿ ಹಾಸ್ಯಗಾರರು ನಿರ್ವಹಿಸುವ ಹಾಸ್ಯೇತರ ಪಾತ್ರಗಳು:

### ಬ್ರಹ್ಮ:

ಶ್ರೀದೇವೀ ಮಹಾತ್ಮೆಯ ಆರಂಭದಲ್ಲಿ ತ್ರಿಮೂರ್ತಿಗಳ ಸಂಭಾಷಣೆಯಲ್ಲಿ ಬರುವಂತಹ ಬ್ರಹ್ಮನ ಪಾತ್ರವನ್ನು ಮೊದಲು ಹಾಸ್ಯಗಾರರೇ ನಿರ್ವಹಿಸುತ್ತಿದ್ದರು. ಹಿಂದೆ ತ್ರಿಮೂರ್ತಿಗಳ ಸಂಭಾಷಣೆ ಇತ್ತೀಚಿನ ದೇವೀ ಮಹಾತ್ಮೆ ಬಯಲಾಟಗಳಲ್ಲಿ ನಡೆಯುವಂತೆ ದೀರ್ಘವಾಗಿರಲಿಲ್ಲ. ಬೇಸ್‌ಗೆ ಕೆಂಪು, ಬಿಳಿ ಮತ್ತು ಹಳದಿ ಬಣ್ಣದ ಮಿಶ್ರಣ. ಈ ಬೇಸ್‌ಗೆ ಛಾಯೆ ಬಣ್ಣ ಎಂದು ಕರೆಯಲಾಗುತ್ತದೆ. ಕಾಡಿಗೆಯ ಮೂಲಕ ಕಣ್ಣು ಮತ್ತು ಹುಬ್ಬನ್ನು ಬರೆಯುವುದು. ಹಣೆಯ ಮಧ್ಯಕ್ಕೆ ಕೆಂಪು ನಾಮ/ ಉದ್ದ-ಅಡ್ಡ ನಾಮ(ಭಾಗವತ ನಾಮ), ಇದರ ಎರಡೂ ಬದಿಗೆ ಬಿಳಿ ಹಾಗೂ ಕೆಂಪು ನಾಮಗಳು, ಹುಬ್ಬಿನ ಮಧ್ಯೆ, ಕಣ್ಣಂಚಿನ ಕೆಳಗೆ ಹಾಗೂ ಗಲ್ಲಕ್ಕೆ ಮುದ್ರೆಗಳು. ಈ ಮುದ್ರೆಗಳಿಗೆ ಮಧ್ಯದಲ್ಲಿ ಕೆಂಪು, ಸುತ್ತ ಬಿಳಿ ಮತ್ತು ಕೆಂಪನ್ನು ಬರೆಯಲಾಗುತ್ತದೆ. ತುಟಿಗೆ ಕೆಂಪು. ಜಾಕೆಟ್, ಕಚ್ಚೆ, ಸೋಕ್ಸ್, ಗೆಜ್ಜೆ, ಒಳ ಇಜಾರು, ಅಂಡು, ಸೀರೆ ಕಚ್ಚೆ, ಒಳ ಪುಂಡು ರವಿಕೆ, ಒಳ ಜಾಕೆಟ್, ಕೆಂಪು ಹೊರ ಜಾಕೆಟ್, ಬೆನ್ನು ಶಾಲು, ಕೈಕಟ್ಟು, ತೋಳ್‌ಕಟ್ಟು, ಡಾಬು, ಸಪೂರ ಡಾಬು, ಎದೆ ಪದಕ, ಅಡ್ಡಿಗೆ, ಗುಂಡಡ್ಡಿಗೆ,

ಕಾಯಿಮಾಲೆ, ಕಾಲಮುಳ್ಳು, ಕಡಗ, ಚೆಂಡು, ನಾಟಕೀಯ ಟೋಪನ್, ಕಿವಿಯ ಗುಂಡು, ತುರಾಯಿ ಕಿರೀಟ ಇವು ವೇಷ ಭೂಷಣಗಳು.

**ವರಕೊಡುವ ಬ್ರಹ್ಮ:**

ಅನೇಕ ಪಾತ್ರಗಳನ್ನು ಓರ್ವನೇ ನಿರ್ವಹಿಸುವ ಅನಿವಾರ್ಯತೆ ಇದ್ದ ಕಾಲದಲ್ಲಿ ವರಕೊಡುವ ಬ್ರಹ್ಮನ ಪಾತ್ರಕ್ಕೆ ಸಾಮಾನ್ಯ ಮುಖವರ್ಣಿಕೆ, ಮೇಲಂಗಿಯನ್ನು ಧರಿಸಿಕೊಂಡು, ಬಿಳಿಯ ಗಡ್ಡವನ್ನು ಕಟ್ಟಿಕೊಂಡು ಬರುತ್ತಿದ್ದರಂತೆ. ಒಂದು ದಿನದ ದೇವೀ ಮಹಾತ್ಮೆಯಲ್ಲಿ ಮಾಲಿನಿ ಹಾಗೂ ಮಹಿಷಾಸುರನ ತಪಸ್ಸಿಗೆ ಒಲಿದು ವರ ನೀಡುವುದಕ್ಕಾಗಿ ಬ್ರಹ್ಮನ ಆಗಮನವಾಗುತ್ತದೆ. ಎರಡು-ಮೂರು ದಿನಗಳ ದೇವೀ ಮಹಾತ್ಮೆಯಾದರೆ ಶುಂಭನಿಗೂ ಬ್ರಹ್ಮ ವರ ನೀಡುವ ಸಂದರ್ಭವನ್ನು ಬಳಸಿಕೊಳ್ಳಲಾಗುತ್ತಿತ್ತು.

ಮೇಳದಲ್ಲಿ ಸಮಯಾವಕಾಶವಿದ್ದಲ್ಲಿ ಹಾಸ್ಯಗಾರರು ಬ್ರಹ್ಮನ ವೇಷಕ್ಕೆ ಆಭರಣಗಳನ್ನೆಲ್ಲಾ ಧರಿಸಿಕೊಂಡೇ ವರಕೊಡಲು ಬರುತ್ತಿದ್ದರು. ಈಗ ಆರಂಭದ ಬ್ರಹ್ಮ, ವರ ಕೊಡುವ ಬ್ರಹ್ಮನ ಪಾತ್ರಗಳನ್ನು ಹಾಸ್ಯಗಾರರ ಬದಲು ಉಳಿದ ಕಲಾವಿದರು ನಿರ್ವಹಿಸುತ್ತಾರೆ. ಆದುದರಿಂದ ಪ್ರಾರಂಭದಲ್ಲಿ ಬಂದ ಬ್ರಹ್ಮನೇ ಅದೇ ವೇಷಭೂಷಣದೊಂದಿಗೆ ವರಕೊಡಲೂ ಬರುತ್ತಾನೆ. ಸಾಮಾನ್ಯವಾಗಿ ಒಂದರಿಂದ ಎರಡು ಪದ್ಯವನ್ನು ನೀಡಲಾಗುತ್ತದೆ.

**ಸುಪಾರ್ಶ್ವಕ:**

ಮಾಲಿನಿಯ ತಪಸ್ಸಿನ ತೀವ್ರತೆಗೆ ಅರಣ್ಯದಲ್ಲಿದ್ದ ಮುನಿಗಳ ತಪಸ್ಸು ವಿಘ್ನವಾಗುತ್ತದೆ. ಸುಪಾರ್ಶ್ವಕನೆಂಬ ಋಷಿಯು ತಮ್ಮ ತಪಸ್ಸಿಗೆ ವಿಘ್ನವುಂಟು ಮಾಡಿದವರನ್ನು ದಿವ್ಯದೃಷ್ಟಿಯಲ್ಲಿ ನೋಡಿ, ಮಹಿಷಿಯ ರೂಪದಲ್ಲಿ ತಪಸ್ಸನ್ನಾಚರಿಸುತ್ತಿರುವ ಮಾಲಿಯನ್ನು ಕಂಡು, ಕೋಪಗೊಂಡು ಆಕೆಯ ಉದರದಲ್ಲಿ ಮಹಿಷನೇ ಹುಟ್ಟುವಂತೆ ಶಾಪ ಕೊಟ್ಟು ನಿರ್ಗಮಿಸುತ್ತಾನೆ. ಇಲ್ಲಿ ಸುಪಾರ್ಶ್ವಕನ ಪ್ರವೇಶವಾದ ನಂತರ ಎರಡರಿಂದ ಮೂರು ಪದ್ಯಗಳನ್ನು ನೀಡಲಾಗುತ್ತದೆ. ಹಣೆಗೆ ಅಡ್ಡನಾಮ, ಬೊಟ್ಟು, ಕಣ್ಣ ಸೋಗೆ, ಹುಬ್ಬಿಗೆ ಕಾಡಿಗೆ, ಹಳದಿ ಕೆಂಪು ಬಣ್ಣಗಳು, ಕಪ್ಪು ಗೀಟುಗಳು, ತುಟಿಗೆ ಕೆಂಪು ಬಣ್ಣ, ಗಡ್ಡ-ಮೀಸೆ, ಕಿವಿಗೆ ಓಲೆ, ತಲೆಗೆ ಜುಟ್ಟು, ಸೋಕ್ಸ್, ಗೆಜ್ಜೆ, ಕಾವಿ ಕಚ್ಚೆ, ಸೊಂಟಕ್ಕೆ ಪೀಸ್, ಕಾಲಪಟ್ಟಿ, ಜನಿವಾರ, ಹೆಗಲಿಗೆ ಅಡ್ಡಕ್ಕೆ ಶಾಲು, ಮಣಿಗಂಟು ಮತ್ತು ತೋಳುಗಳಿಗೆ ಕಪ್ಪು ಬಟ್ಟೆ ಅಥವಾ ಕಪ್ಪು ರಿಂಗ್, ಕೈಯಲ್ಲಿ ಬ್ರಹ್ಮದಂಡವನ್ನು ಹಿಡಿದುಕೊಳ್ಳಲಾಗುತ್ತದೆ.

**ನಾರದ:**

ಹಿಂದೆ ಚಂಡಮುಂಡರ ದಿಗ್ವಿಜಯವಾಗಿ ಶುಂಭನಿಗೂ, ಚಂಡಮುಂಡರಿಗೂ ಸಂಧಾನವನ್ನು ಮಾಡಲು, ಶುಂಭನಿಗೆ ದೇವಲೋಕದ ಮೇಲೆ ಧಾಳಿ ಮಾಡುವಂತೆ ಪ್ರೇರೇಪಿಸುವುದಕ್ಕೆ ನಾರದನು ಬರುತ್ತಿದ್ದುಂಟು. ಈ ಸಂದರ್ಭವನ್ನು ಎರಡು, ಮೂರು, ಐದು ದಿನಗಳ ದೇವೀ ಮಹಾತ್ಮೆಯಲ್ಲಿ ಮಾತ್ರ ಬಳಸಿಕೊಳ್ಳಲಾಗುತ್ತಿತ್ತು. ನಾರದನ ಬಳಕೆ ಈಗ ಎಲ್ಲೂ ಕಾಣಸಿಗುವುದಿಲ್ಲ. ಚಂಡಮುಂಡರ ಹಾಗೂ ಶುಂಭನ ಸಂಧಾನದ ಪ್ರಸಂಗ

ಕಿರಿಯ ಬಲಿಪ ನಾರಾಯಣ ಭಾಗವತರ ಪ್ರಸಂಗದಲ್ಲಿದೆ. ಮುಖಕ್ಕೆ ಸಾಮಾನ್ಯ ಮುಖವರ್ಣಿಕೆ, ವೈಷ್ಣವ ನಾಮ, ನೆತ್ತಿಯ ಮೇಲೆ ಹೂ ಸುತ್ತಿದ ಜುಟ್ಟು, ಕೊರಳಿಗೆ ಹಾರ, ಅರ್ಧಕೈ ಕಾವಿ ಅಂಗಿ, ಕಾವಿ ಕಚ್ಚೆ, ಡಾಬು, ಕಾಲಿಗೆ ಗೆಜ್ಜೆ, ಕೈಯಲ್ಲಿ ಚಿಟಿಕಿ ಇವಿಷ್ಟು ನಾರದನ ವೇಷಭೂಷಣ.

**ಸುಗ್ರೀವ:**

ಶುಂಭನ ಮಂತ್ರಿಯಾದ ಸುಗ್ರೀವನು ಶುಂಭನ ಪರವಾಗಿ ಸಂಧಾನಕ್ಕೆಂದು ದೇವಿಯ ಬಳಿ ಬರುತ್ತಾನೆ. ಇಲ್ಲಿ ಸುಗ್ರೀವನಿಗೆ ಸಾಮಾನ್ಯವಾಗಿ ಮೂರು ಪದ್ಯಗಳು. ದೇವಿಯ ಕಿರುನಗೆಯಿಂದ ಮಡಿದು ಬಿದ್ದ ಸುಗ್ರೀವನಿಗೆ ದೇವಿಯು ಕರುಣಾದೃಷ್ಟಿಯನ್ನು ಬೀರಿ ಮರುಜೀವಕೊಡುತ್ತಾಳೆ. ಇಲ್ಲಿ ಸುಗ್ರೀವನ ಪಾತ್ರವು ಹಾಸ್ಯ ಪಾತ್ರವಲ್ಲದಿದ್ದರೂ ಕೂಡಾ ಆತ ಮರುಜೀವ ಪಡೆದಾಗ ಕೆಲವರು ಲಘು ಹಾಸ್ಯ ಮಿಶ್ರಿತ ಮಾತುಗಳನ್ನಾಡುತ್ತಾರೆ. "ನನಗೆ ಚೆನ್ನಾಗಿ ನಿದ್ರೆ ಬಂತು. ನಿದ್ರೆಯಲ್ಲಿ ಒಂದು ಕನಸು ಬಿತ್ತು. ಕನಸಲ್ಲಿ ನನ್ನ ಮುತ್ತಜ್ಜ, ಅಜ್ಜ ಎಲ್ಲರನ್ನೂ ಕಂಡೆ. ಅವರು ನನ್ನಲಿ ಯಾಕೆ ಮಗ ಇಷ್ಟು ಬೇಗ ಬಂದೆ ಊರಲ್ಲಿ ಎಲ್ಲರೂ ಕ್ಷೇಮವೇ? ಎಂದು ಮುಂತಾಗಿ ಮಾತಾಡಿಸಿದರು." ಈ ರೀತಿಯಾಗಿ ಮಾತನಾಡುತ್ತಾರೆ.

ಛಾಯೆ ಬಣ್ಣ, ಕಣ್ಣಿಗೆ ಹುಬ್ಬಿಗೆ ಕಾಡಿಗೆ, ಹಣೆಗೆ ಪೂರ್ತಿ ಬಿಳಿ ಬಣ್ಣವನ್ನು ಹಾಕಿ ಕಪ್ಪು ಬಣ್ಣದಲ್ಲಿ ಅಡ್ಡನಾಮ, ಹಣೆಯ ಮಧ್ಯಕ್ಕೆ ಕೆಂಪು ಬೊಟ್ಟು, ತುಟಿಗೆ ಕೆಂಪು, ಬಿಳಿ ಬಣ್ಣದ ಗಡ್ಡ, ಬಿಳಿ ಬಣ್ಣದ ಮೀಸೆ, ತಲೆಗೆ ಮುಂಡಾಸು, ಕೆಲವರು ಮುಂಡಾಸಿನ ಮೇಲೆ ತುರಾಯಿಯನ್ನು ಕಟ್ಟುವುದೂ ಇದೆ. ಉದ್ದ ಅಂಗಿ, ಅದರ ಮೇಲೆ ಕೋಟು, ದೊಡ್ಡ ಹೊಟ್ಟೆ, ಕಚ್ಚೆ, ಶಾಲು, ಕೆಲವರು ಜಾಕೆಟ್, ಎದೆ ಪದಕ, ಕಚ್ಚೆಯ ಮೇಲೆ ನೆರಿ, ಡಾಬು, ಕಾಲಿಗೆ ಗೆಜ್ಜೆ. ಈಗ ಸುಗ್ರೀವನಿಗೆ ರಾಜ ವೇಷದಂತೆ ಪೋಷಾಕು, ಬಿಳಿ ಗಡ್ಡ, ಧರ್ಮರಾಯನಿಗೆ ಬಳಸುವಂತಹ ಕಿರೀಟ. ಆತ ಓರ್ವ ಮಂತ್ರಿ ಎನ್ನುವ ನೆಲೆಯಲ್ಲಿ ಈ ಬದಲಾವಣೆ ಬಂದಿದೆ.

ಶ್ರೀದೇವೀ ಮಹಾತ್ಮೆಯಲ್ಲಿ ಬರುವಂತಹ ಪುರೋಹಿತನ ಪಾತ್ರ, ಮಾಲಿನಿ ದೂತ ಇವುಗಳು ಹಾಸ್ಯ ಪಾತ್ರವಾದರೂ ವೇಷಧಾರಿಯು ಓರ್ವ ಪುರೋಹಿತನ ವರ್ಚಸ್ಸಿಗೆ ಹಾಗೂ ದೂತನ ಪಾತ್ರಗೌರವಕ್ಕೆ ಧಕ್ಕೆಯಾಗದಂತೆ ನಡೆದುಕೊಳ್ಳುವುದು ವಿಹಿತ. ಮಾತು ದ್ವಂದ್ವಾರ್ಥಕ್ಕೆ ಆಸ್ಪದ ಕೊಡದಂತಿದ್ದರೆ ಇಲ್ಲಿ ಬರುವ ಹಾಸ್ಯ ಪಾತ್ರಗಳು ಹಾಸ್ಯಾಸ್ಪದವಾಗದೆ ಪ್ರೌಢ ಹಾಸ್ಯವಾಗಿ ಸಹೃದಯೀ ಪ್ರೇಕ್ಷಕರ ಮೆಚ್ಚುಗೆಯನ್ನು ಪಡೆಯುತ್ತದೆ. ರಕ್ತೇಶ್ವರಿಯ ಜೊತೆಗೆ ಬರುವ ಪಾತ್ರಿಯ ಪಾತ್ರವು ಹಾಸ್ಯ ಪಾತ್ರದಂತೆ ಬಿಂಬಿತವಾದರೂ, ಆ ಪಾತ್ರವನ್ನು ಹಾಸ್ಯಕ್ಕಾಗಿ ಬಳಸದಿದ್ದರೆ ಉತ್ತಮ. ಹಾಸ್ಯೇತರ ಪಾತ್ರಗಳನ್ನು ಹಾಸ್ಯಗಾರನು ನಿರ್ವಹಿಸುವುದಾದರೂ ಕೂಡಾ ಆ ಪಾತ್ರಗಳು ಹಾಸ್ಯ ಪಾತ್ರಗಳಂತೆ ಕಾಣದೆ ಅಥವಾ ಅವುಗಳನ್ನು ಹಾಸ್ಯ ಪಾತ್ರಗಳಂತೆ ನೋಡದೆ ಆಯಾ ಪಾತ್ರಗಳ ಸ್ವಭಾವವನ್ನು ಬಿಂಬಿಸುವಂತಿರಬೇಕು.

ಹಿಂದೆ ಮೇಳದಲ್ಲಿ ಒಬ್ಬರೇ ಹಾಸ್ಯಗಾರರು ಇದ್ದುದರಿಂದ ಪ್ರಸಂಗದಲ್ಲಿ ಬರುವ ಎಲ್ಲಾ ಹಾಸ್ಯ ಪಾತ್ರಗಳೊಂದಿಗೆ ಇನ್ನಿತರ ಕೆಲವು ಪೋಷಕ ಪಾತ್ರಗಳನ್ನೂ ಮಾಡುವ

ಅನಿವಾರ್ಯತೆ ಹಾಸ್ಯಗಾರರಿಗಿತ್ತು. ಇಡೀ ರಾತ್ರಿ ಹಾಸ್ಯಗಾರರು ಅನೇಕ ವೇಷಗಳನ್ನು ಮಾಡುತ್ತಿದ್ದುದರಿಂದ ಯಾವ ಪಾತ್ರಗಳನ್ನು ಹೇಗೆ ಬೆಳೆಸಬೇಕು ಅಥವಾ ಹೇಗೆ ಕುಂಠಿತಗೊಳಿಸಬೇಕೆಂಬ ಮಾಹಿತಿ ಹಾಸ್ಯಗಾರನಿಗೆ ಇರಬೇಕಾದುದು ಅತೀ ಅಗತ್ಯ.

ಇತ್ತೀಚಿನ ದಿನಗಳಲ್ಲಿ ಒಂದು ಮೇಳದಲ್ಲಿ ಇಬ್ಬರು ಹಾಸ್ಯಗಾರರು ಇರುತ್ತಾರೆ. ದೇವೀ ಮಹಾತ್ಮೆಯಲ್ಲಿ ಬರುವ ಹಾಸ್ಯ ಪಾತ್ರಗಳನ್ನು ಇಬ್ಬರು ಹಾಸ್ಯಗಾರರು ಹಂಚಿಕೊಂಡು ಮಾಡುತ್ತಾರೆ. ಉಳಿದಂತೆ ಪೋಷಕ ಪಾತ್ರಗಳಾದ ಬ್ರಹ್ಮ, ಸುಪಾರ್ಶ್ವಕ, ಸುಗ್ರೀವನ ಪಾತ್ರಗಳನ್ನು ಮೇಳದ ಇತರ ಕಲಾವಿದರು ನಿರ್ವಹಿಸುತ್ತಾರೆ. ಕಟೀಲು ಶ್ರೀ ದುರ್ಗಾಪರಮೇಶ್ವರಿ ಪ್ರಸಾದಿತ ದಶಾವತಾರ ಯಕ್ಷಗಾನ ಮಂಡಳಿ ಇದರ ಓರ್ವ ಪ್ರಧಾನ ಹಾಸ್ಯಗಾರರಾದ ಶ್ರೀ ರವಿಶಂಕರ ವಳಕ್ಕುಂಜ ಇವರು ಹೇಳುವಂತೆ ಹಾಸ್ಯಗಾರರಿಗೆ ಕೇವಲ ಹಾಸ್ಯ ಪಾತ್ರಕ್ಕೆ ಬೇಕಾಗುವ ವೇಷಭೂಷಣಗಳನ್ನು ಮಾತ್ರ ಮೇಳದಲ್ಲಿ ನೀಡುತ್ತಾರೆ. ಹಾಗಾಗಿ ಪೋಷಕ ಪಾತ್ರಗಳನ್ನು ಆ ಪಾತ್ರಕ್ಕೆ ಬೇಕಾಗುವಂತಹ ವೇಷಭೂಷಣಗಳನ್ನು ಹೊಂದಿರುವ ಕಲಾವಿದರು ನಿರ್ವಹಿಸುತ್ತಾರೆ.

ಹಾಸ್ಯ ಪಾತ್ರಗಳ ಮುಖವರ್ಣಿಕೆ, ವೇಷಭೂಷಣಗಳು ಕಲಾವಿದರ ಮನೋಧರ್ಮಕ್ಕೆ ಅನುಗುಣವಾಗಿ, ಸಮಯದ ಹೊಂದಾಣಿಕೆಗಾಗಿ, ಸಂದರ್ಭಾನುಸಾರವಾಗಿ ಮೂಡಿಬರುತ್ತದೆ. ಹಿಂದೆ ಹಾಸ್ಯಪಾತ್ರವನ್ನು ಕಚ್ಚೆ ಹಾಕಿ, ಮೇಲೊಂದು ಅಂಗಿ ಹಾಕಿ, ಬಿಳಿಮುಂಡಾಸು ಧರಿಸುತ್ತಿದ್ದರು ಎಂದು ಕಿರಿಯ ಬಲಿಪ ಭಾಗವತರು ಹೇಳುತ್ತಾರೆ. ಸುಮಾರು ಎಂಬತ್ತು ವರ್ಷಗಳ ಹಿಂದೆ ಆಗಲಿ ಅಥವಾ ಈಗಿನ ಕಾಲಘಟ್ಟದಲ್ಲಾಗಲೀ ಪಾತ್ರ ಲಕ್ಷಣಗಳು ಒಂದೇ ಆದರೂ ಒಂದೇ ತಲೆಮಾರಿನ ಬೇರೆ ಬೇರೆ ಕಲಾವಿದರಲ್ಲಿ ಹಾಗೂ ಬೇರೆ ಬೇರೆ ಮೇಳಗಳಲ್ಲಿ ವೇಷಭೂಷಣಗಳಲ್ಲಿ, ಸಂಭಾಷಣೆಗಳಲ್ಲಿ ವ್ಯತ್ಯಾಸಗಳು ಇದ್ದುದನ್ನು ಹಾಗೂ ಇರುವುದನ್ನು ಅವಲೋಕಿಸಿದರೆ ಹಾಸ್ಯ ಪಾತ್ರಗಳಿಗೆ ಮತ್ತು ಹಾಸ್ಯಗಾರರು ನಿರ್ವಹಿಸುವ ಇತರ ಪೋಷಕ ಪಾತ್ರಗಳಿಗೆ ನಿಖರವಾದ ರೂಪುರೇಷೆಗಳನ್ನು ಒದಗಿಸಿಕೊಡುವುದು ಕಷ್ಟಸಾಧ್ಯ.

ಕಲೆ ನಿಂತ ನೀರಲ್ಲ. ಬದಲಾವಣೆಗಳು ಕಾಲಕಾಲಕ್ಕೆ ನಡೆಯುತ್ತಾ ಬಂದಿವೆ. ಹಲವಾರು ಬದಲಾವಣೆಗಳನ್ನು ಒಪ್ಪಿ ಮುಂದುವರಿಯುತ್ತಾ ಇದ್ದೇವೆ. ಪ್ರಸಂಗವೊಂದರಲ್ಲಿ ಬರುವ ಏಕತಾನತೆಯನ್ನು ಹೋಗಲಾಡಿಸುವುದಕ್ಕೆ ಪ್ರೇಕ್ಷಕರನ್ನು ನಗಿಸುವುದು ಮಾತ್ರ ಮೂಲ ಉದ್ದೇಶವಾಗದೆ, ಬೌದ್ಧಿಕವಾಗಿ ಚುರುಕು ಮುಟ್ಟಿಸುವುದು ಕೂಡಾ ಪ್ರಬುದ್ಧ ಹಾಸ್ಯಗಾರನ ಕರ್ತವ್ಯ. ಹಾಸ್ಯಗಾರರ ಹಾಸ್ಯದ ಗುಣಮಟ್ಟವನ್ನು ನಿರ್ಧರಿಸುವುದಕ್ಕೆ ಪ್ರೇಕ್ಷಕನೂ ಪ್ರಬುದ್ಧನಾಗಿರಬೇಕು. ಹಾಸ್ಯಗಾರನ ಕಾರ್ಯವೈಖರಿ ಕೇವಲ ಹಾಸ್ಯಕ್ಕಷ್ಟೇ ಸೀಮಿತವಾಗದೆ ಇಡೀ ಪ್ರಸಂಗವನ್ನು ಸಮರ್ಥವಾಗಿ ನಿಭಾಯಿಸುವ ಚಾಕಚಕ್ಯತೆಯನ್ನೂ ಹೊಂದಿರಬೇಕು. ಹಾಗಿದ್ದಲ್ಲಿ ಮಾತ್ರವೇ ಯಕ್ಷಗಾನದಲ್ಲಿ ಹಾಸ್ಯಗಾರನಿಗಿರುವ ಘನತೆ ಉಳಿದುಕೊಳ್ಳುವುದು ಸಾಧ್ಯ.

**ಮಾಹಿತಿದಾರರು:**

- ಶ್ರೀ ಪೆರುವಡಿ ನಾರಾಯಣ ಭಟ್
- ಶ್ರೀ ಬಲಿಪ ನಾರಾಯಣ ಭಾಗವತರು
- ಶ್ರೀ ರವಿಶಂಕರ ವಳಕ್ಕುಂಜ
- ಶ್ರೀಮತಿ ಸರಸ್ವತಿ

**ಪರಾಮರ್ಶನ ಗ್ರಂಥಗಳು:**


1. ಉಪ್ಪಂಗಳ ಶಂಕರನಾರಾಯಣ ಭಟ್. (2017). ತೆಂಕನಾಡ ಯಕ್ಷಗಾನ. ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ. ಬೆಂಗಳೂರು.
2. ಬಲಿಪ ನಾರಾಯಣ ಭಾಗವತ. (2010). ಐದು ದಿನದ ಶ್ರೀದೇವೀ ಮಹಾತ್ಮೆ. ಕಜೆ ಸುಬ್ರಹ್ಮಣ್ಯ ಭಟ್. ಕಜೆ ಮನೆ, ವೇಣೂರು.
3. ಮೋಹನ ಕುಂಟಾರ್. (2014). ಯಕ್ಷಗಾನ ಆಹಾರ್ಯ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ. ಹಂಪಿ.
4. ಹಿರಣ್ಯ ವೆಂಕಟೇಶ್ವರ ಭಟ್ಟ (ಸಂ). (2013). ರಸಿಕರತ್ನ (ವಿಟ್ಲ ಗೋಪಾಲಕೃಷ್ಣ ಜೋಷಿ ಸಂಸ್ಮರಣ ಗ್ರಂಥ). ರಸಿಕರತ್ನ ವಿಟ್ಲ ಜೋಷಿ ಪ್ರತಿಷ್ಠಾನ(ರಿ). ಪರ್ಕಳ.



**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.



**About the License:**
© The Authors 2024. The text of this article is open access and licensed under a Creative Commons Attribution 4.0 International License.